## ತಾತ್ವಿಕ ತಳಹದಿಯಿಲ್ಲದ ಪ್ರಶಸ್ತಿಗಳು

ರಾಜಕುಮಾರ್ ಪ್ರಶಸ್ತಿಗೆ ಪಾತ್ರರಾಗಿರುವ ಎಸ್. ಶಿವರಾಂ ಅವರ ಮೇಲೆ, ಸಬ್ಸಿಡಿ ಲಂಚಪ್ರಕರಣಕ್ಕೆ ಸಂಬಂಧಿಸಿದಂತೆ ದೂರು ದಾಖಲಾಗಿದೆ. ಶಿವರಾಂ ಅವರ ಹಿರಿತನ– ಸಾಧನೆ ಪ್ರಶ್ನಾತೀತ. ಆದರೆ, ಗುರುತರ ಆರೋಪವೊಂದರಲ್ಲಿ ಅವರು ಸಿಲುಕಿರುವಾಗ ಪ್ರಶಸ್ತಿ ನೀಡುವುದು ನೈತಿಕವಾಗಿ ಸರಿಯಾದುದಲ್ಲ.

**2010–2011**ರ ಸಾಲಿನ ರಾಜ್ಯ ಚಲನಚಿತ್ರ ಪ್ರಶಸ್ತಿಗಳು ಪ್ರಕಟಗೊಂಡಿವೆ. ಪ್ರಶಸ್ತಿ ಪಡೆದವರ ಪುಲಕ ಹಾಗೂ ಪ್ರಶಸ್ತಿ ವಂಚಿತರಾದವರ ಅಸಮಾಧಾನ ಸಹಜವಾಗಿಯೇ ವ್ಯಕ್ತವಾಗಿದೆ. ಆದರೆ, ಪ್ರಶಸ್ತಿಗಳ ಆಯ್ಕೆಗೆ ಸಂಬಂಧಿಸಿದಂತೆ ಸದಭಿರುಚಿ ಮತ್ತು ಗುಣಮಟ್ಟ ಇಳಿಮುಖವಾಗುತ್ತಿರುವ ಬಗ್ಗೆ ಕಳೆದ ಕೆಲವು ವರ್ಷಗಳಿಂದ ವ್ಯಕ್ತವಾಗುತ್ತಿರುವ ಆತಂಕಕ್ಕೆ ಪ್ರಸಕ್ತ ಪ್ರಶಸ್ತಿಗಳೂ ಇಂಬು ಕೊಡುವಂತಿರುವುದು ಒಳ್ಳೆಯ ಬೆಳವಣಿಗೆಯೇನಲ್ಲ. ರಾಷ್ಟ್ರಮಟ್ಟದಲ್ಲಿ ಪುರಸ್ಕಾರ ಪಡೆದ 'ಬೆಟ್ಟದ ಜೀವ', 'ಪುಟ್ಟಕ್ಕನ ಹೈವೇ' 'ಬ್ಯಾರಿ' ಮತ್ತು 'ಹೆಜ್ಜೆಗಳು' ಚಿತ್ರಗಳನ್ನು ಸಾರಾಸಗಟಾಗಿ ಪಕ್ಕಕ್ಕೆ ಇರಿಸಿರುವುದು ಅನಾರೋಗ್ಯಕರ ಸಂಪ್ರದಾಯವೊಂದಕ್ಕೆ ನಾಂದಿ ಹಾಡಿದಂತಾಗಿದೆ. ರಾಷ್ಟ್ರಮಟ್ಟದಲ್ಲಿ, ಅಂತರ ರಾಷ್ಟ್ರೀಯ ಮಟ್ಟದಲ್ಲಿ ಕನ್ನಡ ಸಿನಿಮಾದ ಅಸ್ಮಿತೆಯ ಪ್ರದರ್ಶನಕ್ಕೆ ಕಾರಣವಾಗುವ ಸಿನಿಮಾಗಳು ತವರು ನೆಲದಲ್ಲೇ ನಿರ್ಲಕ್ಷ್ಯಕ್ಕೆ ಒಳಗಾಗುವುದು ನಮ್ಮ ವ್ಯವಸ್ಥೆಯ ವಿರೋಧಾಭಾಸದಂತೆ ಕಾಣಿಸುತ್ತದೆ. ಒಳ್ಳೆಯ ಸಿನಿಮಾಗಳು ಯಾರಿಗೂ ಬೇಕಾಗಿಲ್ಲ ಎನ್ನುವ ಸಂದೇಶವನ್ನು ರವಾನಿಸುವಂತಿದೆ.

ಯಾವುದೇ ಪ್ರಶಸ್ತಿಯನ್ನು ಎಲ್ಲರೂ ಮೆಚ್ಚುವಂತೆ ನಿರ್ಣಯಿಸುವುದು ಕಷ್ಟ. ಈ ಹಗ್ಗದ ಮೇಲಿನ ನಡಿಗೆಯಲ್ಲಿ, ಪ್ರಶಸ್ತಿಗೆ ಆಯ್ಕೆ ಮಾಡುವವರು ತಮ್ಮ ತೀರ್ಮಾನಗಳಿಗೆ ಒಂದು ತಾತ್ವಿಕ ನಿಲುವು ಹೊಂದಬೇಕಾದುದು ಅವಶ್ಯಕ. ಅಂಥ ನಿಲುವಿನ ಸ್ಪಷ್ಟ ಗೈರುಹಾಜರಿಯೇ ಪ್ರಸಕ್ತ ಸಾಲಿನ ಪ್ರಶಸ್ತಿಗಳಿಗೆ ಸಂಬಂಧಿಸಿದಂತೆ ಉಂಟಾಗಿರುವ ಗೊಂದಲಗಳಿಗೆ ಕಾರಣ. ತಾತ್ವಿಕತೆಯ ಕೊರತೆ, ಸದಭಿರುಚಿಯ ನಿರ್ಲಕ್ಷ್ಯ ಹಾಗೂ ಬಂಧು–ಬಳಗದ ಮೋಹ ಪ್ರಶಸ್ತಿಗಳ ಆಯ್ಕೆಯಲ್ಲಿ ಮೇಲ್ನೋಟಕ್ಕೆ ಎದ್ದು ಕಾಣುವಂತಿದೆ. ಸಿನಿಮಾಗಳ ಯೋಗ್ಯತೆಗಿಂತಲೂ, ಸಿನಿಮಾ ಮಾಡಿದ ವ್ಯಕ್ತಿಗಳನ್ನೇ ಗಮನಿಸಿ ಪ್ರಶಸ್ತಿಗಳನ್ನು ನಿರ್ಣಯಿಸಿದಂತಿದೆ.

ಉಪೇಂದ್ರ ಅವರ ನಿರ್ದೇಶನದ 'ಸೂಪರ್' ಚಿತ್ರವನ್ನು ಅತ್ಯುತ್ತಮ ಚಿತ್ರವನ್ನಾಗಿ ಆಯ್ಕೆ ಮಾಡಲಾಗಿದೆ. ಕಮರ್ಷಿಯಲ್ ಚಿತ್ರವೊಂದಕ್ಕೆ ಪ್ರಶಸ್ತಿ ನೀಡುವುದು ಸಮಿತಿಯ ಉದ್ದೇಶವಾಗಿದ್ದರೆ, ಸಾಮಾಜಿಕ ಕಾಳಜಿಯನ್ನು ಹೊಂದಿದ ಹಾಗೂ ಕನ್ನಡ ಸಂಸ್ಕೃತಿಯನ್ನು ಪರಿಣಾಮಕಾರಿಯಾಗಿ ಬಿಂಬಿಸಿರುವ ಇತರ ಚಿತ್ರಗಳನ್ನು ಪರಿಗಣಿಸಬಹುದಿತ್ತು. ಜೇಕಬ್ ವರ್ಗೀಸ್ ನಿರ್ದೇಶನದ 'ಪೃಥ್ವಿ' ಚಿತ್ರ, ಸಮಕಾಲೀನ ಗಣಿಗಾರಿಕೆ ಸಮಸ್ಯೆಯ ಬಗ್ಗೆ ಪರಿಣಾಮಕಾರಿಯಾಗಿ ದನಿಯೆತ್ತಿದ ಚಿತ್ರ. ಜಯತೀರ್ಥ ನಿರ್ದೇಶನದ ಹೊಸ ಪ್ರತಿಭೆಗಳ 'ಒಲವೇ ಮಂದಾರ' ಕನ್ನಡ ಸಂಸ್ಕೃತಿಯನ್ನು ಭಾರತೀಯ ಸಂಸ್ಕೃತಿಯೊಂದಿಗೆ ಅನುಸಂಧಾನಗೊಳಿಸಿರುವ ಅಪರೂಪದ ಚಿತ್ರ. ಕಮರ್ಷಿಯಲ್ ನೆಲೆಗಟ್ಟಿನ ಇಂಥ ಚಿತ್ರಗಳನ್ನು ಸಮಿತಿ ಗುರ್ತಿಸಬಹುದಿತ್ತು. ಅನಾಥ ತರುಣನೊಬ್ಬ ಪೋಷಕರನ್ನು ದತ್ತು ಪಡೆಯುವ 'ಮಾಗಿಯ ಕಾಲ' ಚಿತ್ರದ ಈಶ್ವರಚಂದ್ರರ ಕಥೆ ಭಾರತೀಯ ಸಿನಿಮಾ – ಸಾಹಿತ್ಯ ಸಂದರ್ಭದಲ್ಲೇ ಅಪರೂಪದ್ದು. ವಿ.ಕೆ.ಪ್ರಕಾಶ್ ನಿರ್ದೇಶನದ 'ಐದೊಂದ್ಲ ಐದು' ಐದು ಕಥೆಗಳ ವಿಶಿಷ್ಟ ಹೆಣಿಗೆ. ಇಂಥ ಪ್ರಯೋಗಗಳನ್ನೂ ಗುರ್ತಿಸುವ ಗೋಜಿಗೇ ಸಮಿತಿ ಹೋಗಿಲ್ಲ.

ರಾಜಕುಮಾರ್, ವಿಷ್ಣುವರ್ಧನ್ ಪ್ರಶಸ್ತಿಗಳಿಗೆ ಸಂಬಂಧಿಸಿದಂತೆಯೂ ಸಮಿತಿ ತೀರ್ಪು ಪ್ರಶ್ನೆಗಳಿಗೆ ಕಾರಣವಾಗಿದೆ. ರಾಜಕುಮಾರ್ ಪ್ರಶಸ್ತಿಗೆ ಪಾತ್ರರಾಗಿರುವ ಎಸ್. ಶಿವರಾಂ ಅವರ ಮೇಲೆ, ಸಬ್ಸಿಡಿ ಲಂಚಪ್ರಕರಣ ದಾಖಲಾಗಿದೆ. ಶಿವರಾಂ ಅವರ ಹಿರಿತನ– ಸಾಧನೆ ಪ್ರಶ್ನಾತೀತ. ಆದರೆ, ಗುರುತರ ಆರೋಪದಲ್ಲಿ ಅವರು ಸಿಲುಕಿರುವಾಗ ಪ್ರಶಸ್ತಿ ನೀಡುವುದು ನೈತಿಕವಾಗಿ ಸರಿಯಾದುದಲ್ಲ. ಅಂಬರೀಷ್, ವಿಷ್ಣುವರ್ಧನ್ ಪ್ರಶಸ್ತಿಗೆ ಅರ್ಹರು ಎನ್ನುವುದೂ ನಿಜ. ಆದರೆ, ಆಯ್ಕೆ ಸಮಿತಿ ಅಧ್ಯಕ್ಷರಾದ ಭಾರತಿ ವಿಷ್ಣುವರ್ಧನ್ ಅವರ ಕುಟುಂಬಕ್ಕೆ ಅವರು ತೀರಾ ಹತ್ತಿರದವರು. ಪ್ರಶಸ್ತಿಗಳ ಆಯ್ಕೆ ಸಂದರ್ಭದಲ್ಲಿ ಸ್ನೇಹ– ಸಂಬಂಧಗಳು ದೂರ ಇರಬೇಕು. ಅಂಥ ವ್ಯಕ್ತಿಗಳೂ ಸಮಿತಿಯಿಂದ ದೂರ ಇರುವುದು ಅಗತ್ಯ.

ಆದರೆ, ಸಮಿತಿಯ ಆಯ್ಕೆಯಲ್ಲಿ ಕೆಲವು ಒಳ್ಳೆಯ ನಿರ್ಣಯಗಳೂ ಇವೆ. ಸಹೃದಯರ ಗಮನಕ್ಕೆ ಬಾರದೇ ಹೋದ 'ಸೂಸೈಡ್' ಚಿತ್ರದ ನಾಯಕಿ ಕಲ್ಯಾಣಿ ಅವರ ನಟನೆಯನ್ನು ಗುರ್ತಿಸಿರುವುದು ಒಳ್ಳೆಯ ತೀರ್ಪು. ಜಾಗತೀಕರಣ ಸಂದರ್ಭದಲ್ಲಿ ಕನ್ನಡ ಶಾಲೆಗಳ ದಯನೀಯ ಸ್ಥಿತಿಯನ್ನು ಬಿಂಬಿಸುವ 'ಪ್ರಾರ್ಥನೆ' ಚಿತ್ರಕ್ಕೆ ತೀರ್ಪುಗಾರರ ವಿಶೇಷ ಪ್ರಶಸ್ತಿ ನೀಡಿರುವುದೂ ಸಮಂಜಸ. ಆದರೆ, ತೆಲುಗಿನ ಆಯೇಶಾ ಅವರಿಗೆ ಕೊನೆ ಕ್ಷಣದಲ್ಲಿ, ಸುದ್ದಿಗೋಷ್ಠಿಯಲ್ಲಿಯೇ ವಿಶೇಷ ಪ್ರಶಸ್ತಿ ಪ್ರಕಟಿಸಿದ್ದು ಆಯ್ಕೆ ಪ್ರಕ್ರಿಯೆಯಲ್ಲಿನ ಗೊಂದಲಗಳಿಗೆ ಉದಾಹರಣೆಯಂತಿದೆ.

ರೀಮೇಕ್, ಡಬ್ಬಿಂಗ್, ಪೈರಸಿ, ಪರಭಾಷಾ ಚಿತ್ರಗಳ ಸ್ಪರ್ಧೆ ಸೇರಿದಂತೆ ಹಲವು ಸಮಸ್ಯೆಗಳು ಹಾಗೂ ಒಳ ಜಗಳಗಳಿಂದ ಕನ್ನಡ ಚಿತ್ರರಂಗ ಬಡವಾಗುತ್ತಿದೆ. ಈ ಸಾಲಿಗೆ ಸಬ್ಸಿಡಿ–ಪ್ರಶಸ್ತಿಗಳೂ ಸೇರಿಕೊಳ್ಳುತ್ತಿವೆ. ಜನರ ದುಡ್ಡಿನಿಂದ ನೀಡಲಾಗುತ್ತಿರುವ ಸಬ್ಸಿಡಿ ಮತ್ತು ಪ್ರಶಸ್ತಿಗಳನ್ನು ಚಿತ್ರರಂಗದ ಬೆಳವಣಿಗೆಗಾಗಿ ಬಳಸಿಕೊಳ್ಳುವ ವಿವೇಕವನ್ನು ಚಿತ್ರರಂಗ ಹಾಗೂ ಸರ್ಕಾರ ಪ್ರದರ್ಶಿಸಬೇಕಾಗಿದೆ.

■ **ರಘುನಾಥ ಚ.ಹ.**

